Regd No BG 155

Sri "SATYAVADI"
— DAILY —
MYSORE 4
46 th Year

Protect the cow

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯರು [ಬಿಡಿ ಪ್ರತಿ 3 ಪೈ.

11—5—1962

ಪ್ರಮುಖ ವರ್ತಮಾನಗಳಿಗೆ
ಪಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗ್ರಾಹಕರಾಗಿ ಮಾಡಿ

ತಿಂಗಳ ಕಡೆಯೊಳಗೆ ನಿಜಲಿಂಗಪ್ಪನವರ ನಾಯಕತ್ವ

ಮೈಸೂರು ರಾಜಕೀಯ ಸಭೆ ಕಾಂಗ್ರೆಸು ಪಕ್ಷದ ನಾಯಕತ್ವದಲ್ಲಿ ಈ ತಿಂಗಳ ಕಡೆಯಲ್ಲಿ ಅಥವಾ ಜೂನ್ ಮೊದಲನೆ ವಾರದಲ್ಲಿ ಬದಲಾವಣೆ ಆಗುವದಾಗಿ ಸವ ದೆಹಲಿ ಪತ್ರಿಕೆ ತಿಳಿಸುತ್ತದೆ ವಿಧಾನ ಸಭೆಗೆ ಉಪ ಚುನಾವಣೆಗೆ ಆಯ್ಕೆ ಆದ ಶ್ರೀ ಎಸ್ ನಿಜಲಿಂಗಪ್ಪನವರು ಈ ವಾರ 15 ರಂದು ನವ ದೆಹಲಿಯಲ್ಲಿರುವ ಫೀಕ್ಷೆ ಇದೆ ಕಾಶ್ಮೀರಕ್ಕೆ ಪಂ॥ ನೆಹರು ಪ್ರಯಾಣ ಮಾಡುವ ಮುನ್ನ ಅವರು ಪ್ರಧಾನಿ ನೆಹರುರವರ ಸಂಗಡ ಭೇಟಿ ಮಾಡುವರು ನವ ದೆಹಲಿಯಲ್ಲಿ ನಿನ್ನೆ ವೈಸೂರಿನಿಂದ ಆಯ್ಕೆ ಆದ ಪಾರ್ಲಿಮೆಂಟು ಸದಸ್ಯರೊಂದಿಗೆ ಮಾತನಾಡುತ್ತಾ, ಈಗ ನಿಜಲಿಂಗಪ್ಪನವರು ಡೀ ಫ್ಯಾಕ್ಟೊ ಲೀಡರು ಆಗಿದ್ದಾರೆ, ಅವರು ಡಿಜೂರೆ ಲೀಡರು ಕೂಡ ಆಗುವರು ಎಂದರು.

ಪ್ರಮಾಣ ವಚನ

ವಿಧಾನ ಸಭೆಯಲ್ಲಿ ನಿನ್ನೆ ಶ್ರೀ ಎಸ್. ನಿಜಲಿಂಗಪ್ಪನವರು ಪ್ರಮಾಣ ವಚನ ಸ್ವೀಕರಿಸಿದರು ಸ್ವತಂತ್ರ ಪಕ್ಷದ ಸದಸ್ಯರಾದ ಶ್ರೀ ಅಂಗಡಿ ಚೆನ್ನಬಸಪ್ಪನವರು ಕ್ರಿಯಾಲೋಪವೆತ್ತಿ, ಚುನಾವಣೆ ಫಲಿತಾಂಶ ಪ್ರಕಟವಾಗುವ ಮುನ್ನವೇ ಸದಸ್ಯರು ಪ್ರಮಾಣ ವಚನ ಸ್ವೀಕರಿಸಬಹುದೇ ಎಂದ ಕೇಳಿದ್ದಕ್ಕೆ ಸ್ಪೀಕರರು ಹೌದೆಂದು ಉತ್ತರವನ್ನಿತ್ತು, ಫಲಿತಾಂಶ ನನಗೆ ತಿಳಿಸಲ್ಪಟ್ಟಿದೆ.

ಉಡುಪಿಯ ನಿರ್ಬಂಧಕ್ಕೆ ವಿರೋಧ

ಭಾವನಾತ್ಮಕ ಹೊಸ ಅಧ್ಯಕ್ಷರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲು ವಿಧಿಸಿರುವ ಉಡುಪಿನ ನಿರ್ಬಂಧದ ಬಗ್ಗೆ ರಾಜ್ಯಸಭೆಯಲ್ಲಿ ಕಾಂಗ್ರೆಸಿನ ಮತ್ತು ಪ್ರತಿಪಕ್ಷಗಳ ಕೆಲವು ಸದಸ್ಯರು ವಿರೋಧಿಸಿದರು.

ಹೊಸ ನೇಮಕ

ನವ ದೆಹಲಿ 10 — ಪ್ರಧಾನಿ ನೆಹರು ಏಳು ಮಂದಿ ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನು ನೇಮಿಸಿರುವರು. ನಾಳೆ ಅವರು ಪ್ರಮಾಣ ವಚನ ಸ್ವೀಕರಿಸುವರು. ಮೈಸೂರಿನಿಂದ ಶ್ರೀ ದೊಡ್ಡಹನ್ಮಯ್ಯನವರು ನೇಮಕವಾಗಿರುವರು.

ಉಸಿರಾಡದೆ ಜೀವವಿತ್ತು !

ಬರ್ಮೆಲಿ 10 — ಇಲ್ಲಿನ ಜಿಲ್ಲಾ ಆಸ್ಪತ್ರೆಗೆ ಬುಧವಾರ 12 ವರ್ಷದ ಕೃಷ್ಣ ಕುಮಾರಿಯನ್ನು ಸೇರಿಸಿದಾಗ ಆ ಹುಡುಗಿ 24 ಗಂಟೆಗಳ ವರೆಗೆ ಉಸಿರಾಡದೆ ಬದುಕಿದ್ದಳು. ಕೃತಕ ಶ್ವಾಸವನ್ನು ಅವಳಿಗೆ ಕೊಡಲಾಯಿತು. ಈಗ ಅವಳು ಗುಣವಾಗುತ್ತಿರುವಳು.

ಜನತಾ ಕಾರುಗಳಿಲ್ಲ

ನವ ದೆಹಲಿ 10 — ಈಗಿನ ಸೂಚನೆಯ ಪ್ರಕಾರ ಮುಂದಿನ ಯೋಜನೆ ಕಡೆಯ ವರೆಗೆ ಜನತಾ ಕಾರುಗಳ ನಿರ್ಮಾಣದ ಸಂಭವವಿಲ್ಲವೆಂದು ಗೊತ್ತಾಗಿದೆ.

ಪೂರ್ವ ಪಾಕಿಸ್ತಾನಕ್ಕೆ ನಾಗಾ ಜನ

ಏಲಾಂಗ್ 10 — ಇಲ್ಲಿಗೆ ಬಂದಿರುವ ನಂಬಲರ್ಹವಾದ ವಾರ್ತೆಯ ಪ್ರಕಾರ ಇನ್ನೂರು ಮಂದಿ ಶತ್ರು ನಾಗಾಗಳು ಕಾಚಾರ್ ಗಡಿ ಬಳಿ ಹೋಗುತ್ತಿದ್ದಾರೆ.

× ಪೀಕಿಂಗಿನಲ್ಲಿ ನಡೆದ ಮೇ ದಿನಾಚರಣೆಯಲ್ಲಿ ಕಾರ್ಮಿಕ ಸಂಘಗಳು ಭಾಗವಹಿಸುವಂತೆ ಪೀಕಿಂಗಿನಿಂದ ಬಂದಿದ್ದ ಆಹ್ವಾನವನ್ನು ಭಾರತ ಸರ್ಕಾರ ನಿರಾಕರಿಸಿದ ಬಗ್ಗೆ ಆಶ್ಚರ್ಯ ಹಾಗೂ ವಿಷಾದದಿಂದ ಭಾರತಕ್ಕೆ ಚೀನಾ ನೋಟು ಕಳಿಸಿದೆ.

ನಿವೃತ್ತರಾಗುವ ಅಧಿಕಾರಿಗೆ ಬೀಳ್ಕೊಡುಗೆ

ನವ ದೆಹಲಿ 10 — ದೆಹಲಿಯ ನೂರಾರು ಸಹಸ್ರ ಜನರು, ಅಧ್ಯಕ್ಷ ಪದವಿಯಿಂದ ನಿವೃತ್ತರಾಗುವ ಸಂದರ್ಭದಲ್ಲಿ ಈ ದಿನ ಗೌರವಯುತ ಬೀಳ್ಕೊಡುಗೆಯನ್ನು ಇತ್ತರು. ರಾಷ್ಟ್ರಪತಿ ಭವನದಲ್ಲಿ ನಡೆದ ಸಾಮೂಹಿಕ ಕಾರ್ಯಾಲಯದಲ್ಲಿ ಭಾರತದ ಉಪಾಧ್ಯಕ್ಷರು ಹಾಗೂ ಪ್ರಧಾನಿಗಳು ಮಾತನಾಡಿ, ಡಾ॥ ಪ್ರಸಾದರು ಭಾರತದ ಸಂಕೇತ ಎಂದರು. ಕಡೆಗಿತ್ತ ಬೀಳ್ಕೊಡುಗೆಗೆ ಪ್ರಸಾದರು ಉತ್ತರವನ್ನು ಕೊಡುತ್ತಾ, ತಮ್ಮ ಆರೋಗ್ಯ ಅಸಹಕಾರ ಮಾಡಿದಾದರೆ ದೇಶದ ಸೇವೆ ಮಾಡುವದಾಗಿ ತಿಳಿಸಿದರು. ಪ್ರಸಾದರಿಗೆ ಕಾಣಿಕೆಗಳನ್ನು ಕೊಡಲಾಯಿತು.

ಹಡಗು ಕಳಿಸಿ

ನವ ದಾಸ್ 10 — ಅಮೆರಿಕದ ಅಣು ಪ್ರಯೋಗಕ್ಕೆ ಸವಾಲು ಹಾಕಲು ಹಾಗೂ ಇಷ್ಟದ ಪ್ರತಿಕ್ರಿಯವನ್ನು ತಪ್ಪಿಸಲು ಪ್ರಧಾನಿ ನೆಹರು ಒಪ್ಪುವದಾದರೆ ಕ್ರಿಸ್ಮಸ್ ದ್ವೀಪಕ್ಕೆ ಭಾರತದ ಹಡಗು ಒಂದನ್ನು ಕಳಿಸಬೇಕೆಂದು ಶ್ರೀ ಸಿ. ರಾಜಗೋಪಾಲಾಚಾರಿಯವರು ಹೇಳಿಕೆಯ ನೀಡಿರುವರು.

ವಿಫಲ ಯತ್ನ

ನ್ಯೂಯಾರ್ಕ್ 10 — ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಮತ್ತೆ ಚರ್ಚೆಗೆ ತರುವದರಲ್ಲಿ ಪಾಕಿಸ್ತಾನ ಮತ್ತೆ ವಿಫಲವಾಗಿದೆ

೦೦೦

ಶ್ರೀಗಳಾದ ದೇಶಪಾಂಡೆ ದಕ್ಷತೆ ತ್ಯೆಯ ಹಾಗೂ ವ್ಯೋಹನಕಾನನೆಯವರನ್ನು ಬಿಡುಗಡೆ ಮಾಡಲು ಪೊರ್ಚುಗೀಸು ಅಧಿಕಾರಿಗಳು ನಿರಾಕರಿಸಿದ್ದಾರೆ. ಅವರು ಸ್ವಾತಂತ್ರ್ಯ ಹೋರಾಟಗಾರರು

ಗೊತ್ತೇ ಇಲ್ಲ !

ಕಾಲಿಪಾಂಗಿನಲ್ಲಿ ಕಳೆದ ತಿಂಗಳು ಗೋಳೀಬಾರು ಆಯಿತೆಂಬ ವಿಚಾರ ಗೊತ್ತಿಲ್ಲವೆಂದು ಪ್ರಧಾನಿ ನೆಹರು ನಿನ್ನೆ ಲೋಕಸಭೆಯಲ್ಲಿ ತಿಳಿಸಿದರು.

ಎಚ್ಚರಿಕೆ

ತಾವು ಅನುಮತಿ ಕೊಡದ ವಿಚಾರಗಳನ್ನು ಸಭೆಯಲ್ಲಿ ಎತ್ತಕೂಡದೆಂದು ಸ್ಪೀಕರ್ ಶ್ರೀ ಹುಕುಂಸಿಂಗರು ನಿನ್ನೆ ಲೋಕಸಭೆಯಲ್ಲಿ ವಿರೋಧಪಕ್ಷದವರಿಗೆ ಎಚ್ಚರಿಸಿದರು.

ಅಂಗೀಕೃತ

ಮುಂದಿನ ಜುಲೈ 1 ರಿಂದ ಜಾರಿಗೆ ಬರುವ ರಾಗಣೆಗೆ ಹಾಗೂ ಪ್ರಯಾಣದ ಪ್ರಥಮ ದರ್ಜೆಯ ಅಂದಾಜು ಶೇಟ್ಟಿ ಅಂಗೀಕೃತವಾಯಿತು. ಪ್ರಯಾಣಿಕರ ಸಾರ್ವಜನಿಕರ ಹೆಚ್ಚಿನ ಹಣ ಒದಗಿಸಬೇಕೆಂಬುದು ತಿರಸ್ಕೃತವಾಯಿತು.

★

ನಿನ್ನೆ ಗೋವಾ ಮಿಲಿಟರಿ ಗವರ್ನರ್ರವರು ಗೌಂವಾರ್ಥ 10 ವರೆ ಗಂಟೆಗೆ ವಾಸ್ಕೊಡಿಗಾವ-ದಲ್ಲಿ ವಿಮಾನಪತ್ರ ಅರ್ಪಿಸುವ ಕಾರ್ಯಕ್ರಮ ಇತ್ತು. ಬೆಳಿಗ್ಗೆ 7 ಗಂಟೆಗೆ ಬಾಂಬು ಸಿಡಿದು ಓರ್ವ ವ್ಯಕ್ತಿ ಗಾಯಗೊಂಡರು.

ತಮ್ಮ ಮಂತ್ರಿ ಮಂಡಲದಲ್ಲಿ ಕೆಲವು ಖಾಲಿ ಇಲ್ಲವೆಂದು ಆಂಧ್ರದ ಮುಖ್ಯ ಮಂತ್ರಿ ಶ್ರೀ ಎ ಸಂಜೀವರೆಡ್ಡಿ ನಿನ್ನೆ ಹೈದರಾಬಾದಿನಲ್ಲಿ ತಿಳಿಸಿದರು

ನಾಳೆಯ ಕಾರ್ಯಕ್ರಮ

ಆಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ ದೈವಜ್ಞಶಿರೋಮಣಿ
ಸಂಪತ್ಕುಮಾರ ಜೋಯಿಸರಿಂದ
12 ಅಷ್ಟಮಿ ವ.ಖು

ಪುಸ್ತಕದ ಬಹಿಷ್ಕಾರ

ನವದೆಹಲಿ 10— ಶ್ರೀ ಕೊಯುಸ್ಲೊರವರು ಪ್ರಕಟಿಸಿರುವ 'ದಿ ಲೋಟಸ್ ಅಂಡ್ ರೋಬೊ' ಎಂಬ ಪುಸ್ತಕವು ಭಾರತಕ್ಕೆ ಬಾರದಂತೆ ಪ್ರತಿಬಂಧಿಸಲಾಗಿದೆ; ಈ ಪುಸ್ತಕದಲ್ಲಿ ಗಾಂಧೀಜಿಯವರ ಬಗ್ಗೆ ಅಕ್ಷೇಪಾರ್ಹ ಉಲ್ಲೇಖಗಳಿವೆ: ಪುಸ್ತಕದ ಎಷ್ಟು ಪ್ರತಿಗಳು ಭಾರತಕ್ಕೆ ಬಂದಿವೆ ಎಂಬ ವಿಚಾರ ತಿಳಿದಿಲ್ಲ, ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು

ಭಾರತದ ಗೋವಾ ಕಾರ್ಯಾಚರಣೆ

ಮ್ಯೂನಿಚ್ (ಡಾಡ್)— ಭಾರತವು ಗೋವಾ ಪ್ರದೇಶವನ್ನು ತನ್ನ ದಾಗಿಸಿಕೊಂಡಿದ್ದು ಸರಿಯೇ? ಭಾರತವು ತನ್ನ ಶಾಂತಿದ್ಯೋತಕವನ್ನು ತ್ಯಜಿಸಿ ಗೋವಾ ಮೇಲೆ ಕಾರ್ಯಾಚರಣೆ ನಡೆಸಿದ್ದು ಅದರ ಬಹುಕಾಲದ ನೀತಿಗೆ ವಿರೋಧವಾದದ್ದು ಎಂದು ಹಲವಾರು ಪತ್ರಿಕೆಗಳಲ್ಲಿ ಲೇಖನಗಳು ಬರುತ್ತಿದ್ದುದನ್ನು ಕಂಡ ಮೇಲೆ, ಈ ಬಗ್ಗೆ ಜರ್ಮನಿಯ ಜನತೆಯೂ ಸಭೆಸೇರಿ ವಿವಾದಿಸಿತು; ಭಾರತದ ಕಾರ್ಯಾಚರಣೆಯಲ್ಲಿ ನ್ಯಾಯುವಿಹಿತೆ ಯಿಂದು ಕಡೆಯಲ್ಲಿ ತೀರ್ಮಾನಕ್ಕೆ ಬರಲಾಯಿತು

ಇಂಥ ಆಸ್ಪತ್ರೆ ಬೇರೆಲ್ಲೂ ಇಲ್ಲ

ಮ್ಯೂನಿಕ್ (ಡಾಡ್)— ಈ ನಗರದಲ್ಲಿ ಈಚೆಗೆ ಬ್ರಹ್ಮಾಂಡವಾದೊಂದು ಆಸ್ಪತ್ರೆಗೆ ಅಸ್ತಿಭಾರ ಹಾಕಲಾಯಿತು: ಇನ್ನು ಹತ್ತು ವರ್ಷಗಳಲ್ಲಿ ಸಿದ್ಧವಾಗಲಿರುವ ಈ ಆಸ್ಪತ್ರೆಗೆ ಈಡಾದ ಆಸ್ಪತ್ರೆಯು ಜಗತ್ತಿನಲ್ಲಿ ಬೇರೆಲ್ಲೂ ಇರುವುದಿಲ್ಲವೆಂದು ಈಗಾಗಲೇ ಎಲ್ಲೆಡೆಯೂ ಹೇಳಲಾಗುತ್ತಿದೆ: ವಿಜ್ಞಾನ, ವೈದ್ಯಕೀಯ ಗಳು ಎಷ್ಟು ದೂರ ಮುಂದುವರಿದಿವೆಯೋ ಅಷ್ಟೆಲ್ಲಾ ಸೌಲಭ್ಯಗಳೂ ಇದರಲ್ಲಿ ಇರುತ್ತವೆ

★

ಪುರಂದರದಾಸರು ಕಂಡ ಲೋಕದ ರೀತಿನೀತಿಗಳು

— ಬಲ್ಲವನೊಳಗೆ ಬಿಲ್ಲಿನಂತೆ ಬಾಗಿರಬೇಕು —

ಈ ಸಂಸಾರದಲ್ಲಿ ಕೆಲವು ಕಟ್ಟುನಿಟ್ಟುಗಳನ್ನು ಪಾಲಿಸಬೇಕು: ಕಠಿಣವಾದ ಸಂಸಾರವೆಂಬ ನದಿಯಲ್ಲಿ ಕಲ್ಲಿನಂತೆ ಇದ್ದು ಅದರ ಪ್ರವಾಹಕ್ಕೆ ಸಿಲುಕದೆ ಅದರ ಅಡಿಯಲ್ಲಿ ತಂಗಿರಬೇಕು ಬಲ್ಲವರೊಳಗೆ ಬಿಲ್ಲಿನಂತೆ ಬಾಗಿ (ವಿನಯದಿಂದ) ಇರಬೇಕು; ಬಂಧುಜನರೊಳಗೆ ಬೆಲ್ಲದಂತೆ ಸವಿಯಾಗಿರಬೇಕು: ದೇವರ ಮನಸ್ಸನ್ನು ಮೆಲ್ಲನೆ ಮೆಲ್ಲನೆ ಮೆಚ್ಚಿಸಬೇಕು; ಬುದ್ಧಿಯನ್ನು ಉಪಯೋಗಿಸಿ ನವ ತನ್ನ ಮನಗಳ ವ್ಯಾಪಾರಗಳನ್ನು ತಿದ್ದಬೇಕು; ಮುನಿಯೋಗಿಗಳ ವ್ಯಾಪಾರವನ್ನು ತಿದ್ದಬೇಕು; ಮುನಿಯೋಗಿಗಳ ಪಿಸುಮಾತು ಆಗಿ ತ್ರಿಕರಣ ಪೂರ್ವಕ (ಕಾಯಾ ವಾಚಾ ಮನಸಾ) ಶುದ್ಧರಾಗಿ ಮಧ್ವಮತವೆಂಬ ಸಾಗರದಲ್ಲಿ ಮಿಂದು ನಿಂತೆ ಈಜಾಡಬೇಕು; ಪಂಚೇಂದ್ರಿಯ ಸುಖಸಾಧನಗಳೆಂಬ ಹುಲ್ಲಿಗೆ ಬೆಂಕಿಯಾಗಿದ್ದು ಅದನ್ನು ಸುಟ್ಟುಹಾಕಬೇಕು; ಹಗಲು ರಾತ್ರಿಯೆನ್ನದೆ ಶ್ರೀ ಹರಿಯನ್ನು ನೆನೆಯಬೇಕು, ಹಾಗೂ ಹರಿದಾಸರ ಸೇವೆಯನ್ನು ಮಾಡಬೇಕು.

———

ಪೌ ಶ್ರೀರಾಮನವಮಿ ಪ್ರಯುಕ್ತ, ನಾಳೆ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ.

Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋಸಂರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನ್ಯವನ್ನು ದುಡ್ಡು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ವುಡ್‌ಲ್ಯಾಂಡ್ಸ್ ಆನಂದದ 14 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್
ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಯಶಸ್ವಿ 4 ನೇ ವಾರ

ಸಂಪೂರ್ಣ ರಾಮಾಯಣ
- ಕನ್ನಡ -
[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]



ಅಮೇರಿಕಾ ಕಾರ್ಮಿಕ ವರ್ಗ ಅಧ್ಯಕ್ಷರು ಸಂಬಂಧಿಸಿದ ಚಿತ್ರಗಳು

For Quality Printing ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
L. N. Press ಅಶೋಕಾ ಫಾರ್ಮಸಿ
Sivarampet, Mysore ಅಶೋಕಾ ಬಜಾರ್ ಮೈಸೂರು

Edited, Printed & Published by the Proprietor, Dharma Prrchara Nirata M. S. Krishna Rao, at the Satyavadi Press Chamarajapuram, Mysore 4.